**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: ಶ್ರೀ.ಡಿ.ವಾಸುದೇವ., ಪ್ರಾಂಶುಪಾಲರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಕಾರ್ಕಳ-ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಬಗ್ಗೆ.

(((o)))

**ಓದಲಾಗಿದೆ:**

1) ತಾಂತ್ರಿಕ ಶಿಕ್ಷಣ ನಿರ್ದೇಶಕರ ಪತ್ರಸಂಖ್ಯೆ: ಡಿಟಿಇ 32 ಡಿಇಕ್ಯೂ (1) 2012, ದಿನಾಂಕ: 02.04.2013.
2) ತಾಂತ್ರಿಕ ಶಿಕ್ಷಣ ನಿರ್ದೇಶಕರ ಜ್ಞಾಪನಸಂಖ್ಯೆ: ಡಿಟಿಇ 02 ಐಎನ್ಎಸ್ (1) 2012 (ಏಕಕಡತ), ದಿನಾಂಕ: 02.04.2013.
3) ತಾಂತ್ರಿಕ ಶಿಕ್ಷಣ ನಿರ್ದೇಶಕರ ಜ್ಞಾಪನಸಂಖ್ಯೆ: ಡಿಟಿಇ 02 ಐಎನ್ಎಸ್ (1) 2012 (ಏಕಕಡತ), ದಿನಾಂಕ: 12.06.2013 & ದಿನಾಂಕ: 23.07.2013.
4) ಸರ್ಕಾರದ ಆದೇಶಸಂಖ್ಯೆ: ಇಡಿ 184 ಡಿಟಿಇ 2013 ದಿನಾಂಕ: 25-07-2013.
5) ತಾಂತ್ರಿಕ ಶಿಕ್ಷಣ ನಿರ್ದೇಶಕರ ಪತ್ರಸಂಖ್ಯೆ: ಡಿಟಿಇ 32 ಡಿಇಕ್ಯೂ (1) 2012 (ಏಕಕಡತ)/4282, ದಿನಾಂಕ: 01.02.2014.
6) ಸರ್ಕಾರದ ಆದೇಶಸಂಖ್ಯೆ: ಇಡಿ 184 ಡಿಟಿಇ 2013 ದಿನಾಂಕ: 25-07-2013.
7) ಸರ್ಕಾರದ ಪತ್ರಸಂಖ್ಯೆ: ಇಡಿ 50 ಡಿಟಿಇ 2014, ದಿನಾಂಕ: 08-09-2014.
8) ಸರ್ಕಾರದ ಪತ್ರಸಂಖ್ಯೆ: ಇಡಿ 50 ಡಿಟಿಇ 2014, ದಿನಾಂಕ: 19-11-2014.
9) ಶ್ರೀ.ಡಿ.ವಾಸುದೇವ., ರವರು ನೀಡಿರುವ ಸಮಜಾಯಿಸಿ ಪತ್ರ, ದಿನಾಂಕ: 15.12.2014.
10) ಸರ್ಕಾರದ ಪತ್ರಸಂಖ್ಯೆ: ಇಡಿ 50 ಡಿಟಿಇ 2014, ದಿನಾಂಕ: 13-02-2015.
11) ತಾಂತ್ರಿಕ ಶಿಕ್ಷಣ ನಿರ್ದೇಶಕರ ಪತ್ರಸಂಖ್ಯೆ: ಡಿಟಿಇ 32 ಡಿಇಕ್ಯೂ (1) 2012/4067, ದಿನಾಂಕ: 05.03.2015.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮಸಂಖ್ಯೆ (1)ರ ಪತ್ರದಲ್ಲಿ ತಾಂತ್ರಿಕ ಶಿಕ್ಷಣ ನಿರ್ದೇಶಕರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಕಾರ್ಕಳ-ಇಲ್ಲಿ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ.ಡಿ.ವಾಸುದೇವ., ಇವರು ಸರ್ಕಾರದ/ಇಲಾಖೆಯ ನೀತಿನಿಯಮಾವಳಿಗಳನ್ನು ಸರಿಯಾಗಿ ಪಾಲಿಸದೇ ಕರ್ತವ್ಯದಲ್ಲಿ ನಿರ್ಲಕ್ಷ್ಯತೆ ತೋರುತ್ತಿರುವುದರಿಂದ ಸದರಿ ಸಂಸ್ಥೆಯಲ್ಲಿ ವ್ಯಾಸಂಗಮಾಡುತ್ತಿರುವ ವಿದ್ಯಾರ್ಥಿನಿಯರ ವ್ಯಾಸಂಗಕ್ಕೆ ತೊಂದರೆಯುಂಟಾಗುತ್ತಿರುವುದಾಗಿ, ವಿದ್ಯಾರ್ಥಿನಿಯರು/ಪೋಷಕರು ಹಾಗೂ ಸಂಸ್ಥೆಯ ಸಿಬ್ಬಂದಿಗಳಿಂದ ಹಲವಾರು ದೂರುಗಳು ಬಂದಿರುತ್ತದೆ ಎಂದು ತಿಳಿಸಲಾಗಿದೆ. ಸದರಿಯವರು ತಮ್ಮ ಕರ್ತವ್ಯ ನಿರ್ಲಕ್ಷ್ಯತೆಯಿಂದ ಸಂಸ್ಥೆಗೆ ಮಂಜೂರಾದ ವಾರ್ಷಿಕ ಅನುದಾನವನ್ನು ಸಮರ್ಪಕವಾಗಿ ಬಳಸದೇ ಸಂಸ್ಥೆಗೆ ಆರ್ಥಿಕವಾಗಿ ನಷ್ಟವುಂಟಾಗಲು ಕಾರಣರಾಗಿರುತ್ತಾರೆಂದು ಪ್ರಮುಖ ದಿನಪತ್ರಿಕೆಗಳಲ್ಲಿ ವರದಿಗಳು ಪ್ರಕಟವಾದ ಹಿನ್ನೆಲೆಯಲ್ಲಿ, ಇಲಾಖೆಯ ವತಿಯಿಂದ ಈ ಬಗ್ಗೆ ಪೂರ್ವಭಾವಿ ತನಿಖೆ ನಡೆಸಿ, ತನಿಖೆಯಲ್ಲಿ ಸದರಿಯವರ ವಿರುದ್ಧದ ಆರೋಪಗಳು ಸತ್ಯವೆಂದು ಕಂಡುಬಂದ ಹಿನ್ನೆಲೆಯಲ್ಲಿ ಸದರಿಯವರ ವಿರುದ್ಧ ಪೂರ್ಣಪ್ರಮಾಣದ ತನಿಖೆಯನ್ನು ನಡೆಸಲು ತನಿಖಾ ತಂಡವನ್ನು ಕಳುಹಿಸಿದ್ದು, ತನಿಖೆಯ ನಂತರ ನೀಡುವ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದೆಂದು ತಿಳಿಸಿ ಅಲ್ಲಿಯವರೆಗೆ ಸದರಿಯವರನ್ನು ನಿಲಂಬನೆಯಲ್ಲಿರಿಸಿ ಸರ್ಕಾರದ ಆದೇಶ ಹೊರಡಿಸಬೇಕೆಂದು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮಸಂಖ್ಯೆ (2) ಮತ್ತು (3)ರ ಪತ್ರಗಳಲ್ಲಿ ತಾಂತ್ರಿಕ ಶಿಕ್ಷಣ ನಿರ್ದೇಶಕರು, ಶ್ರೀ.ಡಿ.ವಾಸುದೇವ., ಇವರ ವಿರುದ್ಧದ ಆರೋಪಗಳ ಬಗ್ಗೆ ವಿವರವಾದ ತನಿಖೆಯನ್ನು ನಡೆಸಲು ತನಿಖಾತಂಡವನ್ನು ರಚಿಸಿ ಪೂರ್ಣಪ್ರಮಾಣದ ತನಿಖೆಯನ್ನು ನಡೆಸಿ ವರದಿಯನ್ನು ಸಲ್ಲಿಸುವಂತೆ ಸೂಚಿಸಿರುತ್ತಾರೆ.

ಮೇಲೆ ಓದಲಾದ ಕ್ರಮಸಂಖ್ಯೆ (4)ರ ಸರ್ಕಾರದ ಆದೇಶದಲ್ಲಿ ಶ್ರೀ.ಡಿ.ವಾಸುದೇವ., ಪ್ರಾಂಶುಪಾಲರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಕಾರ್ಕಳ-ಇವರನ್ನು ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ನಿಲಂಬನೆಯಲ್ಲಿರಿಸಿ ಆದೇಶ ಹೊರಡಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮಸಂಖ್ಯೆ (5)ರ ಪತ್ರದಲ್ಲಿ ತಾಂತ್ರಿಕ ಶಿಕ್ಷಣ ನಿರ್ದೇಶಕರು ಶ್ರೀ.ಡಿ.ವಾಸುದೇವ., ಪ್ರಾಂಶುಪಾಲರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಕಾರ್ಕಳ-ಇವರ ವಿರುದ್ಧದ ಇಲಾಖಾ ವಿಚಾರಣೆಯು ಪ್ರಗತಿಯಲ್ಲಿದ್ದು, ಶ್ರೀ.ಡಿ.ವಾಸುದೇವ., ರವರನ್ನು ನಿಲಂಬನೆಯಲ್ಲಿರಿಸಿ ಈಗಾಗಲೇ 06 ತಿಂಗಳುಗಳು ಕಳೆದಿರುವುದರಿಂದ ನಿಯಮಾನುಸಾರ ಸದರಿಯವರ ನಿಲಂಬನೆಯನ್ನು ತೆರವುಗೊಳಿಸಿ, ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ಪುನಃ ಸೇವೆಗೆ ನಿಯುಕ್ತಿಗೊಳಸಬೇಕಾಗಿರುವುದರಿಂದ ಸದರಿಯವರನ್ನು ಸ್ಥಳನಿಯುಕ್ತಿಗೊಳಿಸಿ ಆದೇಶವನ್ನು ಹೊರಡಿಸಬೇಕೆಂದು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮಸಂಖ್ಯೆ (6)ರ ಸರ್ಕಾರದ ಆದೇಶದಲ್ಲಿ ಶ್ರೀ.ಡಿ.ವಾಸುದೇವ., ಪ್ರಾಂಶುಪಾಲರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಕಾರ್ಕಳ-ಇವರ ವಿರುದ್ಧದ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ಸದರಿಯವರ ನಿಲಂಬನೆಯನ್ನು ತೆರವುಗೊಳಿಸಿ, ಪುನಃ ಸರ್ಕಾರಿ ಪಾಲಿಟೆಕ್ನಿಕ್, ದೇವದುರ್ಗ-ಇಲ್ಲಿನ ಪ್ರಾಂಶುಪಾಲರಾಗಿ ಪುನರ್‌ಸ್ಥಾಪಿಸಿ ಆದೇಶ ಹೊರಡಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮಸಂಖ್ಯೆ (7)ರ ಸರ್ಕಾರದ ಪತ್ರದಲ್ಲಿ ಶ್ರೀ.ಡಿ.ವಾಸುದೇವ., ಇವರ ನಿಲಂಬನೆಯನ್ನು ತೆರವುಗೊಳಿಸಿ, ಪುನಃ ಸರ್ಕಾರಿ ಪಾಲಿಟೆಕ್ನಿಕ್, ದೇವದುರ್ಗ-ಇಲ್ಲಿನ ಪ್ರಾಂಶುಪಾಲರಾಗಿ ಪುನರ್‌ಸ್ಥಾಪಿಸಿ ಆದೇಶ ಹೊರಡಿಸಿರುವುದರಿಂದ ಸದರಿಯವರ ವಿರುದ್ಧ ಕರಡು ದೋಷಾರೋಪಣಾ ಪಟ್ಟಿಯನ್ನು ಕೂಡಲೇ ಸಲ್ಲಿಸುವಂತೆ ತಾಂತ್ರಿಕ ಶಿಕ್ಷಣ ನಿರ್ದೇಶಕರಿಗೆ ಸೂಚಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮಸಂಖ್ಯೆ (8)ರ ಸರ್ಕಾರದ ಪತ್ರದಲ್ಲಿ ತಾಂತ್ರಿಕ ಶಿಕ್ಷಣ ನಿರ್ದೇಶಕರ ಮುಖಾಂತರ ಶ್ರೀ.ಡಿ.ವಾಸುದೇವ., ಇವರಿಗೆ ಸದರಿಯವರ ವಿರುದ್ಧದ ದೋಷಾರೋಪಣಾ ಪಟ್ಟಿಗೆ ಕಾರಣ ಕೇಳ ನೋಟೀಸನ್ನು ಜಾರಿಗೊಳಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮಸಂಖ್ಯೆ (9)ರ ಪತ್ರದಲ್ಲಿ ಶ್ರೀ.ಡಿ.ವಾಸುದೇವ., ಇವರು ತಮ್ಮ ವಿರುದ್ಧದ ದೋಷಾರೋಪಣೆಗಳಗೆ ಲಿಖಿತ ಉತ್ತರವನ್ನು ಸಲ್ಲಿಸಿ, ತಮ್ಮ ಮೇಲಿನ ಆರೋಪಗಳನ್ನು ನಿರಾಕರಿಸಿರುತ್ತಾರೆ.

ಮೇಲೆ ಓದಲಾದ ಕ್ರಮಸಂಖ್ಯೆ (10)ರ ಸರ್ಕಾರದ ಪತ್ರದಲ್ಲಿ ಕರಡು ದೋಷಾರೋಪಣಾಪಟ್ಟಿಯಲ್ಲಿನ ಆರೋಪಗಳಗೆ ಶ್ರೀ.ಡಿ.ವಾಸುದೇವರವರು ಸಲ್ಲಿಸಿದ್ದ ಲಿಖಿತ ಉತ್ತರವನ್ನು ತಾಂತ್ರಿಕ ಶಿಕ್ಷಣ ನಿರ್ದೇಶಕರಿಗೆ ಕಳುಹಿಸಿ, ಸದರಿಯವರ ಉತ್ತರಗಳನ್ನು ಪರಿಶೀಲಿಸಿ ತಮ್ಮ ಅಭಿಪ್ರಾಯದೊಂದಿಗೆ ಸರ್ಕಾರಕ್ಕೆ ವರದಿಯನ್ನು ಸಲ್ಲಿಸುವಂತೆ ಕೋರಲಾಗಿರುತ್ತದೆ.

ಮೇಲೆ ಓದಲಾದ ಕ್ರಮಸಂಖ್ಯೆ (11)ರ ಪತ್ರದಲ್ಲಿ ತಾಂತ್ರಿಕ ಶಿಕ್ಷಣ ನಿರ್ದೇಶಕರು, ಶ್ರೀ.ಡಿ.ವಾಸುದೇವ., ರವರು ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಕಾರ್ಕಳ-ಇಲ್ಲಿ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ತಮ್ಮ ಕರ್ತವ್ಯ ನಿರ್ಲಕ್ಷ್ಯತೆಯಿಂದ ಕರ್ನಾಟಕ ನಾಗರೀಕ ಸೇವಾ (ನಡತೆ) 1966ರ ನಿಯಮಗಳು ಉಪನಿಯಮ 3(1) (2) ಮತ್ತು (3)ನ್ನು ಉಲ್ಲಂಘಿಸಿ ಒಬ್ಬ ಜವಾಬ್ದಾರಿಯುತ ಸರ್ಕಾರಿ ಅಧಿಕಾರಿಗೆ ತರವಲ್ಲದ ರೀತಿಯಲ್ಲಿ ವರ್ತಿಸಿ ಸಂಸ್ಥೆಯ ವಿದ್ಯಾರ್ಥಿನಿಯರ ವ್ಯಾಸಂಗಕ್ಕೆ ಹಾಗೂ ಸಂಸ್ಥೆಗೆ ಹಲವಾರು ರೀತಿಯಲ್ಲಿ ತೊಂದರೆ/ಆರ್ಥಿಕನಷ್ಟವನ್ನುಂಟುಮಾಡಿರುವುದು ಇಲಾಖೆಯು ನಡೆಸಿದ ಪೂರ್ವಭಾವಿ ತನಿಖೆ ಹಾಗೂ ನಂತರದಲ್ಲಿ ನಡೆಸಿದ ಸಂಪೂರ್ಣ ತನಿಖೆಯಿಂದ ನಿಜವೆಂದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಆದರೆ ಸದರಿಯವರು ಅವರ ವಿರುದ್ಧ ಹೊರಡಿಸಲಾಗಿದ್ದ ದೋಷಾರೋಪಣಾ ಪಟ್ಟಿಯಲ್ಲಿನ ಆರೋಪಗಳನ್ನು ಒಪ್ಪಿಕೊಳ್ಳದಿರುವುದರಿಂದ ಸದರಿಯವರ ವಿರುದ್ಧ ಸರ್ಕಾರದ ಹಂತದಲ್ಲಿಯೇ ಒಬ್ಬ ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಮುಖಾಂತರ ಇಲಾಖಾ ವಿಚಾರಣೆಯನ್ನು ನಡೆಸುವುದು ಸೂಕ್ತವೆಂದು ಅಭಿಪ್ರಾಯಪಟ್ಟಿದ್ದು, ಈ ಕುರಿತು ಸೂಕ್ತ ಸರ್ಕಾರಿ ಆದೇಶ ಹೊರಡಿಸಬೇಕೆಂದು ಕೋರಿರುತ್ತಾರೆ.

ಮೇಲೆ ತಿಳಿಸಿದ ಎಲ್ಲಾ ಅಂಶಗಳನ್ನು ಪರಿಶೀಲಿಸಿ, ಸರ್ಕಾರವು ಶ್ರೀ.ಡಿ.ವಾಸುದೇವ., ಇವರ ವಿರುದ್ಧದ ಆರೋಪಗಳ ಸತ್ಯಾಸತ್ಯತೆಯನ್ನು ಅರಿಯಲು ಇಲಾಖಾ ವಿಚಾರಣೆಯನ್ನು ನಡೆಸಲು ನಿವೃತ್ತ ನ್ಯಾಯಾಧೀಶರೊಬ್ಬರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲು ನಿರ್ಣಯಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ:ಇಡಿ 50 ಡಿಟಿಇ 2014,**
**ಬೆಂಗಳೂರು, ದಿನಾಂಕ: 21ನೇ ಮೇ 2015.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ.ಡಿ.ವಾಸುದೇವ., ಇವರು ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಕಾರ್ಕಳ-ಇಲ್ಲಿ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸುತ್ತಿದ್ದಾಗ ತಮ್ಮ ಕರ್ತವ್ಯ ನಿರ್ಲಕ್ಷ್ಯತೆಯಿಂದ ವಿದ್ಯಾರ್ಥಿನಿಯರ ವ್ಯಾಸಂಗಕ್ಕೆ ಹಾಗೂ ಸಂಸ್ಥೆಗೆ ಹಲವಾರು ರೀತಿಯಲ್ಲಿ ತೊಂದರೆ/ ಆರ್ಥಿಕ ನಷ್ಟವನ್ನುಂಟುಮಾಡಿರುವ ಬಗ್ಗೆ ಸದರಿಯವರ ವಿರುದ್ಧ ಮಾಡಲಾಗಿರುವ ದೋಷಾರೋಪಣೆಗಳಿಗೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆಯನ್ನು ನಡೆಸಲು ಕರ್ನಾಟಕ ನಾಗರೀಕ ಸೇವಾ (ಸಿ.ಸಿ.ಎ) ನಿಯಮಗಳು, 1957ರ ನಿಯಮ 11ರ ಉಪಬಂಧಗಳಗನುಸಾರವಾಗಿ (2) ಮತ್ತು (5)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ.ಹೆಚ್.ವಿ.ರಾಮಚಂದ್ರರಾವ್, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, #16/13, 3ನೇ ಮಹಡಿ, 1ನೇ ಮೇನ್, ಕೆಂಪಣ್ಣ ಲೇಔಟ್, ಪ್ಯಾಲೇಸ್ ಗುಟ್ಟಹಳ್ಳಿ, ಬೆಂಗಳೂರು-560020 ಇವರನ್ನು ವಿಚಾರಣಾಧಿಕಾರಿಗಳನ್ನಾಗಿ ಹಾಗೂ ಇದೇ ನಿಯಮದ ನಿಯಮ 11(5)(ಸಿ) ಅಡಿಯಲ್ಲಿ ಶ್ರೀ.ಜಿ.ನಿರಂಜನ್‌ದಾಸ್ ರಾಜ್‌ಭಾನ್, ಜಂಟಿ ನಿರ್ದೇಶಕರು (ಆಡಳಿತ), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಅರಮನೆ ರಸ್ತೆ, ಬೆಂಗಳೂರು-ಇವರನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳನ್ನಾಗಿ ನೇಮಕ ಮಾಡಲಾಗಿದೆ.

ವಿಚಾರಣಾಧಿಕಾರಿಗಳು ಕರ್ನಾಟಕ ನಾಗರೀಕ ಸೇವಾ (ಸಿ.ಸಿ.ಎ) 1957ರ ನಿಯಮ 11 ರಡಿಯಲ್ಲಿ ತಿಳಿಸಲಾಗಿರುವ ಕಾರ್ಯ ವಿಧಾನವನ್ನು ಅನುಸರಿಸಿ ಇಲಾಖಾ ವಿಚಾರಣೆಯನ್ನು 03 ತಿಂಗಳ ಒಳಗಾಗಿ ಪೂರ್ಣಗೊಳಿಸಿ ವರದಿ ನೀಡುವಂತೆ ತಿಳಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
21/5/15
**(ಬಿ.ನಾಗಭೂಷಣ್),**
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ).
21/5/15

ಗೆ:

1. ಶ್ರೀ.ಹೆಚ್.ವಿ.ರಾಮಚಂದ್ರರಾವ್, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, # 16/13, 3ನೇ ಮಹಡಿ, 1ನೇ ಮೇನ್, ಕೆಂಪಣ್ಣ ಲೇಔಟ್, ಪ್ಯಾಲೇಸ್ ಗುಟ್ಟಹಳ್ಳಿ, ಬೆಂಗಳೂರು-560020 (ಆಪಾದಿತರಿಗೆ ಜಾರಿ ಮಾಡಲಾದ ಆರೋಪಣಾ ಪಟ್ಟಿ ಹಾಗೂ ದಾಖಲಾತಿಗಳೊಂದಿಗೆ ಕಳುಹಿಸಿದೆ) (R.P.A.D.).
2. ಶ್ರೀ.ಜಿ.ನಿರಂಜನ್‌ದಾಸ್ ರಾಜ್‌ಭನ್, ಜಂಟನಿರ್ದೇಶಕರು (ಆಡಳಿತ), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಅರಮನೆ ರಸ್ತೆ, ಬೆಂಗಳೂರು (ಆಪಾದಿತರಿಗೆ ಜಾರಿ ಮಾಡಲಾದ ಆರೋಪಣಾ ಪಟ್ಟಿ ಹಾಗೂ ದಾಖಲಾತಿಗಳೊಂದಿಗೆ ಕಳುಹಿಸಿದೆ) (R.P.A.D.).

ಪ್ರತಿ:

1. ಮಹಾಲೇಖಪಾಲರು (ಎ&ಇ, ಲೆಕ್ಕಪರಿಶೋಧನೆ-1, ಲೆಕ್ಕಪರಿಶೋಧನೆ-2), ಕರ್ನಾಟಕ, ಬೆಂಗಳ್ರರು.
2. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ಮುಖ್ಯ ಆಡಳಿತಾಧಿಕಾರಿ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
4. ಪ್ರಾಂಶುಪಾಲರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಕಾರ್ಕಳ.
5. ಸಂಬಂಧಿಸಿದ ಪ್ರಾಂಶುಪಾಲರಿಗೆ (ತಾಂತ್ರಿಕ ಶಿಕ್ಷಣ ನಿರ್ದೇಶಕರ ಮುಖಾಂತರ).
6. ಶಾಖಾ ರಕ್ಷಾ ಕಡತ.
7. ಹೆಚ್ಚಿನ ಪ್ರತಿಗಳು.

**ಹಿಂಬರಹ ಸಂಖ್ಯೆ:** ಡಿಟಿಇ 32 ಡಿಇಕ್ಯೂ(1) 2012 ಏಕಕಡತ /S91 ದಿನಾಂಕ: 27/05/2015

ಸರ್ಕಾರದ ಆದೇಶ ಸಂಖ್ಯೆ: ಇಡಿ/50/ಡಿಟಿಇ/2014, ದಿನಾಂಕ: 21/05/2015ನ್ನು ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಈ ಕೆಳಕಂಡವರಿಗೆ ಕಳುಹಿಸಲಾಗಿದೆ.

ಆದೇಶಾನುಸಾರ,
28/5/15

**ಇವರಿಗೆ:-** ಶ್ರೀ. ಡಿ.ವಾಸುದೇವ, ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಕಾರ್ಕಳ. ಹಾಲಿ ಸರ್ಕಾರಿ ಪಾಲಿಟೆಕ್ನಿಕ್, ದೇವದುರ್ಗ (ಅಮಾನತ್ತಿನಲ್ಲಿರುವ)

**ಪ್ರತಿ – ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ**

1. ಶ್ರೀ.ಹೆಚ್.ವಿ.ರಾಮಚಂದ್ರರಾವ್, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, #16/13, 3ನೇ ಮಹಡಿ, 1ನೇ ಮೈನ್, ಕೆಂಪಣ್ಣ ಲೇಔಟ್, ಪ್ಯಾಲೇಸ್ ಗುಟ್ಟಹಳ್ಳಿ, ಬೆಂಗಳೂರು–560 003
2. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
3. ಮುಖ್ಯಮಂತ್ರಿಗಳ ಪತ್ರಿಕಾ ಕಾರ್ಯಾಲಯ, ವಿಕಾಸಸೌಧ, ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿಯವರು, ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ), ಬಹುಮಹಡಿಗಳ ಕಟ್ಟಡ, ಬೆಂಗಳೂರು
5. ಶ್ರೀ.ಜಿ.ನಿರಂಜನ್‌ದಾಸ್ ರಾಜ್‌ಭನ್, ಜಂಟಿನಿರ್ದೇಶಕರು,(ಆಡಳಿತ), ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
6. ಕಾರ್ಯದರ್ಶಿಯವರು, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು (ಸದರಿಯವರ ಇಲಾಖಾ ವಿಚಾರಣೆ ಮುಗಿದು ಅಥವಾ ಮುಂದಿನ ಆದೇಶದವರೆಗೂ ಯಾವುದೇ ಪರೀಕ್ಷಾ ಕಾರ್ಯಗಳಿಗೆ ನೇಮಿಸಬಾರದೆಂದು ಸೂಚಿಸಲಾಗಿದೆ)
7. ಪ್ರಿನ್ಸಿಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಕಾರ್ಕಳ
8. ನಿರ್ದೇಶಕರ ಆಪ್ತಶಾಖೆಗೆ ಮಾಹಿತಿಗಾಗಿ.
9. ಇ-ಆಡಳಿತ ವಿಭಾಗ, ಸದರಿ ಆದೇಶವನ್ನು ಇಲಾಖಾ ವೆಬ್‌ಸೈಟ್ ಅಳವಡಿಸುವ ಸೂಕ್ತ ಕ್ರಮಕ್ಕಾಗಿ.
10. ಇಎಸ್‌ಟಿ(1)ಎ, ಇಎಸ್‌ಟಿ(9), ಇಎಸ್‌ಟಿ(7), ನಿರ್ದೇಶನಾಲಯ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ.